ಶಿಗ್ಗಾಂವ್ ತಾಲ್ಲೂಕಿನ ಬಂಕಾಪುರದಲ್ಲಿ 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್

2080 (2236) - ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್ ಕ್ಷೇತ್ರದ ಸವಣೂರು ತಾಲ್ಲೂಕಿನ ಹತ್ತಿಮತ್ತೂರು ಹಾಗೂ ಶಿಗ್ಗಾಂವ ತಾಲ್ಲೂಕಿನ ಬಂಕಾಪುರದಲ್ಲಿ ನಿರ್ಮಿಸುತ್ತಿರುವ 33 ಕೆ.ವಿ. ಗ್ರೇಡ್ ಯಾವ ಹಂತದಲ್ಲಿದೆ?

ಆ) ಪ್ರತಿ 33 ಕೆ.ವಿ. ಸ್ಟೇಷನ್‌ಗೆ ತೆಗೆಯುವ ವೆಚ್ಚ ಎಷ್ಟು?

ಇ) ಇವುಗಳನ್ನು ಯಾವಾಗ ಪೂರ್ಣಗೊಳಿಸಿ ಚಾಲನೆ ಮಾಡಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಹತ್ತಿಮತ್ತೂರ ಮತ್ತು ಬಂಕಾಪೂರದಲ್ಲಿ ಸ್ಥಾಪಿಸಲಾಗುತ್ತಿರುವ 33 ಕೆ.ವಿ. ವಿದ್ಯುತ್ ಸಬ್- ಸ್ಟೇಷನ್‌ಗಳ ನಿರ್ಮಾಣ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದೆ.

ಆ) ತಗಲುವ ವೆಚ್ಚ:

1) ಕೆ.ಟಿ ಸಬ್ ಸ್ಟೇಷನ್ ರೂ. 195.55 ಲಕ್ಷಗಳು

2) 33 ಕೆ.ವಿ. ಸಬ್‌ಸ್ಟೇಷನ್ ಬಂಕಾಪುರ - ರೂ. 176.93 ಲಕ್ಷಗಳು

ಇ) ನಿರ್ಮಾಣ ಕಾರ್ಯವನ್ನು ಜನವರಿ -2003 ರ ಅಂತ್ಯದ ವೇಳೆಗೆ ಪೂರ್ಣಗೊಳಿಸಿ ಚಾಲನೆ ಮಾಡುವ ಗುರಿಯನ್ನು ಹೊಂದಲಾಗಿದೆ.

ಸವಣೂರು ಮೋತಿ ತಲಾಬ ಏತ ನೀರಾವರಿ ಯೋಜನೆ

2081 (2239) - ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರು ಮೋತಿ ತಲಾಬ ಏತ ನೀರಾವರಿ ಯೋಜನೆ ಯಾವ ಹಂತದಲ್ಲಿದೆ?

ಆ) ಈ ಯೋಜನೆಗೆ ಮಂಜೂರಾದ ಹಣ ಎಷ್ಟು;

ಇ) ಈ ಯೋಜನೆಗೆ ಇಲ್ಲಿಯವರೆಗೆ ಆದ ವೆಚ್ಚವೆಷ್ಟು;

ಈ) ಈ ಕಾಮಗಾರಿಯ ಹಿನ್ನೆಡೆಯ ಕಾರಣಗಳೇನು;

ಉ) ಈ ಕಾಮಗಾರಿಯನ್ನು ಎಷ್ಟು ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಸವಣೂರು ಮೋತಿ ತಲಾಬ ಏತ ನೀರಾವರಿ ಯೋಜನೆ ನಿರ್ಮಾಣ ಹಂತದಲ್ಲಿದೆ. ಸವಣೂರು ತಾಲ್ಲೂಕಿನ ಮಳ್ಳಿಗಟ್ಟಿ ಹಳ್ಳಿಯ ಹತ್ತಿರ ವರದ ನದಿಯ ಎಡದಂಡೆ ಮೇಲೆ ಜಾಕವೆಲ್ ನಿರ್ಮಾಣವಾಗುತ್ತಲಿದೆ. ಇನ್‌ಟೇಕ್ ವೆಲ್, ಇನ್‌ಟೇಕ್ ಪೈಪು ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದೆ. ಒಂದನೇ ಹಂತದ ಡೆಲವರಿ ಚೇಂಬರ್ ಮತ್ತು ಎರಡನೇ ಹಂತದ ಪಂಪ್ ಹೌಸ್ ಕಾಮಗಾರಿಗಳು ಪೂರ್ಣಗೊಂಡಿದೆ. ವಿದ್ಯುತ್ ಸರಬರಾಜು ಮತ್ತು ಪೈಪು ಸರಬರಾಜು ಮತ್ತು ಜೋಡಣೆ ಕಾಮಗಾರಿಗಳ ಹೊರತು ಪಡಿಸಿ ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) 1999-2000 ನೇ ಸಾಲಿನಲ್ಲಿ ಸದರಿ ಕಾಮಗಾರಿಗೆ ರೂ. 160.50 ಲಕ್ಷಕ್ಕೆ ಅನುಮೋದನೆ ದೊರೆತಿದೆ. 2002-03 ನೇ ಸಾಲಿನಲ್ಲಿ ರೂ. 1.50 ಲಕ್ಷ ಅನುದಾನ ದೊರೆತಿದೆ. (ಆಯವ್ಯಯ ಅನುಬಂಧ -೫) ಪುಟ ಸಂಖ್ಯೆ:319 ಕ್ರಮ ಸಂಖ್ಯೆ:3 ವಿದ್ಯುತ್ ಸರಬರಾಜಿಗಾಗಿ ರೂ. 1.40 ಲಕ್ಷ ಅನುದಾನವಿರುತ್ತದೆ.

ಇ) ಡಿಸೆಂಬರ್ 2002 ರ ಅಂತ್ಯದವರೆಗೆ ರೂ. 3.62 ಲಕ್ಷ ಹಣ ಪಾವತಿ ಮಾಡಲಾಗಿದೆ.

ಈ) ಸರಬರಾಜು ಮತ್ತು ಜೋಡಣೆ ಕಾಮಗಾರಿಗಳಿಗೆ ಕರೆಯಲಾಗಿದ್ದ ಟೆಂಡರಿಗೆ ನೆಮೂದಿಸಲಾಗಿದ್ದ ದರಗಳ ಶೇ. 162.50 ಕ್ಕೆ ಹೆಚ್ಚಾಗಿದ್ದರಿಂದ, ಇದನ್ನು ತಿರಸ್ಕರಿಸಲಾಗಿತ್ತು. ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯು ನೀಡಿರುವ ಸೂಚನೆಯಂತೆ, ಪೈಪುಗಳ ಮಾದರಿಯನ್ನು ಬದಲಾಯಿಸಿ ಪಿ.ಎ.ಸಿ. ಪೈಪುಗಳನ್ನು ಅಳವಡಿಸಲು ರೂ. 327.50 ಲಕ್ಷಗಳಿಗೆ ಅಂದಾಜನ್ನು ತಯಾರಿಸಲಾಗಿದ್ದು, ಈ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ ನಂತರ, ತಾಂತ್ರಿಕ ಮಂಜೂರಾತಿ ದೊರೆತ ನಂತರ, ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ಸವಣೂರು ಬಸ್ ಘಟಕದ ಕಟ್ಟಡ ನಿರ್ಮಾಣ

2082 (2241) - ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರು ಬಸ್ ಘಟಕದ ಕಟ್ಟಡ ನಿರ್ಮಾಣ ಬಗ್ಗೆ ಸರ್ಕಾರದ ಕ್ರಮವೇನು;

ಆ) ಈ ಕಾಮಗಾರಿಗೆ ತಗಲುವ ವೆಚ್ಚ ಎಷ್ಟು;

ಇ) ಬಸ್ ಘಟಕದ ನಿರ್ಮಾಣದ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು;

ಈ) ಈ ಘಟಕದಿಂದ ಎಷ್ಟು ಬಸ್ಸುಗಳು ಓಡುತ್ತಿವೆ?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು):

ಅ) ಸರಕಾರಕ್ಕೆ ಬಸ್ ಘಟಕವನ್ನು ನಿರ್ಮಾಣ ಮಾಡುವ ಸದುದ್ದೇಶವಿದೆ. ಆದರೆ, ಅಸಲು ದಾವೆ ಸಂಖ್ಯೆ 6/99 ರಲ್ಲಿ ಮಾನ್ಯ ಸಿವಿಲ್ ಜಡ್ಜ ಹಿರಿಯ ವಿಭಾಗ, ಹಾವೇರಿ ನ್ಯಾಯಾಲಯವು ಈ ದಾವೆಯಲ್ಲಿ ಪಕ್ಷಗಾರರಾಗಿರುವಂತಹ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಗೆ ಮತ್ತು ಘಟಕದ ನಿವೇಶನದ ಹಕ್ಕುದಾರರೆಂದು ಪ್ರತಿವಾದಿಸುತ್ತಿರುವ ಶ್ರೀಮತಿ ಶಹಜಾದಾ ಬೇಗಂ ಇವರಿಬ್ಬರಿಗೂ ಮಧ್ಯಂತರ ಆದೇಶದ ಮೂಲಕ ಸದರೀ ನಿವೇಶನದಲ್ಲಿ ಯಥಾ ಸ್ಥಿತಿಯನ್ನು ಕಾಪಾಡಿಕೊಂಡು ಹೋಗಲು ಹಾಗೂ ಇನ್ನು ಮುಂದೆ ಯಾವುದೇ ರೀತಿಯ ಅಭಿವೃದ್ಧಿ ಕಾಮಗಾರಿಗಳನ್ನು ಅಲ್ಲಿ ಮಾಡದಿರುವಂತೆ ಆದೇಶಿಸಿದೆ.

ಆ) ನ್ಯಾಯಾಲಯದ ತಕರಾರು ಇತ್ಯರ್ಥವಾದ ನಂತರ, ಅವಶ್ಯಕತೆಗೆ ಅನುಗುಣವಾಗಿ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುವುದು.

ಇ) ಮೇಲೆ ತಿಳಿಸದಂತಹ ಕಾನೂನು ತೊಡಕು ನಿವಾರಣೆಯಾದ ತಕ್ಷಣ ಕಾಮಗಾರಿ ಪ್ರಾರಂಭಿಸುವ ಬಗ್ಗೆ ಕ್ರಮ ಜರುಗಿಸಲಾಗುವುದು.